**2ನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮದ್ದೂರು**

**ಸಿ.ಸಿ.674/2016**

**ಫಿರ್ಯಾಧಿಃ-** **ಮದ್ದೂರು ಪೊಲೀಸ್ ಠಾಣೆ**

**-ವಿರುದ್ಧ-**

**ಆರೋಪಿತರು ಃ-**
1. ರಾಜು ಕೆ ಎಲ್ ಬಿನ್ ಲಕ್ಕರಾಜು, 27 ವರ್ಷ,
   ಮಾರುತಿ ಲಾಡ್ಜ್ ಲೀಸ್ ಮಾಲೀಕ,
   ಕೊಣಸಾಲೆ ಗ್ರಾಮ, ಮದ್ದೂರು ತಾಃ

2. ಯೋಗೇಶ್ ಬಿನ್ ಜವರೇಗೌಡ, 28 ವರ್ಷ,
   ಮಾರುತಿ ಲಾಡ್ಜ್ ಮ್ಯಾನೇಜರ್,
   ಮರಕಾಡದೊಡ್ಡಿ ಗ್ರಾಮ, ಮದ್ದೂರು ತಾಃ

**-ಃ ದೋಷಾರೋಪಣೆ ಃ-**

ಶ್ರೀ **ಕೋನಪ್ಪ ಎನ್ ವಿ.,** ಬಿ.ಎ.ಎಲ್, ಎಲ್.ಎಲ್.ಬಿ., ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಮದ್ದೂರು ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತಿದ್ದೇನೆಃ

ದಿನಾಂಕ 15/02/2016 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಮದ್ದೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗೆಜ್ಜಲಗೆರೆ ಕಾಲೋನಿಯ ಹತ್ತಿರ ಐಶ್ವರ್ಯ ಕಾನ್ವೆಂಟ್ ಮತ್ತು ಕಿಟ್ಟಿ ಡಾಬಾ ಇರುವ ಅಂದರೆ ಮೈಸೂರು-ಬೆಂಗಳೂರು ಮುಖ್ಯ ರಸ್ತೆಯ ದಕ್ಷಿಣಕ್ಕೆ ಇರುವ ಮಾರುತಿ ರೆಸಿಡೆನ್ಸಿ ಲಾಡ್ಜ ನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿರುವ ಬಗ್ಗೆ ಮಾಹಿತಿ ಬಂದ ಮೇರೆಗೆ ಚಾಸಾ.1 ರವರು ಚಾಸಾ.8 ಮತ್ತು 9 ರವರನ್ನು ಹಾಗೂ ಸಿಬ್ಬಂದಿಗಳಾದ ಚಾಸಾ.2 ರಿಂದ 7 ರವರನ್ನು ಕರೆದುಕೊಂಡು ಸದರಿ ಲಾಡ್ಜ್ ಮೇಲೆ ದಾಳಿ ಮಾಡಿದಾಗ 1 ಮತ್ತು 2 ನೇ ಆರೋಪಿತರಾದ ನೀವುಗಳು ಕೃತ್ಯದ ಸ್ಥಳದಲ್ಲಿದಿಂದ ಪರಾರಿಯಾಗಿದ್ದು, ಲಾಡ್ಜ್ ನ ರೂಂಗಳನ್ನು ಚಾಸಾ.8 ಮತ್ತು 9 ರವರ ಸಮಕ್ಷಮ ಪರಿಶೀಲನೆ ಮಾಡಿದಾಗ ರೂಂ ನಂಃ 104 ರಲ್ಲಿ 3 ನೇ ಆರೋಪಿಯು ಚಾಸಾ.10 ರವರ ಜೊತೆ, ರೂಂ ನಂಃ 106 ರಲ್ಲಿ 4 ನೇ ಆರೋಪಿಯು ಚಾಸಾ.11 ರವರ ಜೊತೆ, ರೂಂ ನಂಃ 107 ರಲ್ಲಿ 5 ನೇ ಆರೋಪಿಯು ಚಾಸಾ.12 ರವರ ಜೊತೆ ಇದ್ದು, 1 ಮತ್ತು 2 ನೇ ಆರೋಪಿತರಾದ ನೀವುಗಳು ಚಾಸಾ.10, 11, 12 ರವರನ್ನು ತಮ್ಮ ಲಾಡ್ಜ್ ನಲ್ಲಿ ಅಕ್ರಮವಾಗಿ ಇಟ್ಟುಕೊಂಡು ಗಿರಾಕಿಗಳಾದ ಆರೋಪಿ 3 ರಿಂದ 5 ರವರ ಜೊತೆ ಲೈಂಗಿಕ ಕ್ರಿಯೆಯಲ್ಲಿ

ತೊಡಗಲು ಬಿಟ್ಟು ಅಕ್ರಮವಾಗಿ ಹಣ ಸಂಪಾದನೆ ಮಾಡುತ್ತಿದ್ದರಿಂದ ಐ.ಟಿ.ಪಿ. ಆಕ್ಟ್ 3 ರಿಂದ 7, 10 ಮತ್ತು 11 ರಡಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀರಿ ಎನ್ನುವುದಾಗಿದೆ?

ಪ್ರಶ್ನೆ-1 : ದೋಷಾರೋಪಣೆಯ ಸಂಗತಿಗಳು ನಿಮಗೆ ತಿಳಿದಿದೆಯೇ?

ಉತ್ತರ :

ಪ್ರಶ್ನೆ-2 : ಈ ದೋಷಾರೋಪಣೆಯನ್ನು ಒಪ್ಪಿಕೊಳ್ಳಲಿಚ್ಛಿಸುವಿರಾ ಅಥವಾ ಪ್ರಕರಣವನ್ನು ಮುಂದುವರಿಸಬಯಸುವಿರಾ?

ಉತ್ತರ :

(ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರ ಉತ್ತರವನ್ನು ಯತಾವತ್ತಾಗಿ ಬರೆದುಕೊಂಡಿದೆ.)

**(ಕೋನಪ್ಪ ಎನ್ ವಿ)**
**ದಿನಾಂಕ: 27-06-2023** **2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಮದ್ದೂರು**